ಕಣ್ಣದಾಸನ್ ಮತ್ತು ಅವನ ಪತ್ನಿ ರೇವತಿ ಮಲೇಷ್ಯಾದಲ್ಲಿ ನೆಲೆ ಕಂಡುಕೊಳ್ಳಲು ನಡೆಸುವ ತಮ್ಮದೇ ಬಗೆಯ ಹೋರಾಟದ ಕತೆ ಒಂದು ತೆರದ್ದಾದರೆ ದೊರೈ ಮತ್ತು ಜೋಮೋರಿಂದ ನಮ್ಮೆದುರು ತೆರೆದುಕೊಳ್ಳುವ ಜಗತ್ತು ಇನ್ನೊಂದೇ ತೆರದ್ದು ಮತ್ತು ಹೆಚ್ಚು ಮುಖ್ಯವಾದದ್ದು.

ಸ್ವಾಭಾವಿಕ ವ್ಯವಸ್ಥೆಯನ್ನು ಮತ್ತಷ್ಟು ಸಂಕೀರ್ಣಗೊಳಿಸಲು ಆಧುನಿಕ ಮನುಷ್ಯನ ಜೀವನಕ್ರಮದಲ್ಲಿ ಧರ್ಮ, ಜಾತಿ, ಲಿಂಗ, ದೇಶ, ಭಾಷೆ, ಬಣ್ಣ, ಆಹಾರ ಮುಂತಾಗಿ ಪ್ರತಿಯೊಂದೂ ಬೆಸೆಯುವ ಮತ್ತು ಒಡೆಯುವ ಕೆಲಸಗಳಿಗೆ ಬಳಕೆಯಾಗುತ್ತ ಬಂದಿವೆ. ಮೂಲತಃ ಬೆಸೆಯುವುದಕ್ಕೆಂದೇ ಹುಟ್ಟಿರಬಹುದಾದ ಈ ಯಾವತ್ತೂ ಅಂಶಗಳು ಕ್ರಮೇಣ ಒಡೆಯುವುದಕ್ಕೇ ಹೆಚ್ಚು ಹೆಚ್ಚಾಗಿ ಬಳಸಲ್ಪಡುತ್ತಿರುವುದು ಆಧುನಿಕತೆಯ ಒಂದು ಲಕ್ಷಣವಾಗಿ ದಾಖಲಾಗಿದೆ ಎನ್ನುವುದು ಕೂಡ ಅಷ್ಟೇ ನಿಜ. ಹಾಗಾಗಿ ಅವನು ಎಲ್ಲೆಲ್ಲಿ ಹೆಜ್ಜೆಯಿರಿಸುತ್ತಾನೋ ಅಲ್ಲೆಲ್ಲ ಬಯಸುವ ಸಮಾನತೆಯ ನೆಲೆಗಳು ಯಾವುವು, ಅವು ಸಾಮುದಾಯಿಕವೆ ವೈಯಕ್ತಿಕವೆ ಎನ್ನುವುದು ಮೇಲ್ನೋಟಕ್ಕೆ ಅಸ್ಪಷ್ಟ. ಹಾಗಾಗಿ ಅವನ ಕೂಗಿನಲ್ಲಿ ಬೇಡಿಕೆ ಇದೆಯೇ, ದರ್ಪವಿದೆಯೇ ಎನ್ನುವುದು ಮುಖ್ಯವಾಗುತ್ತದೆ.

ನನಗೆ ಸಿಗಬೇಕಾದುದು ಸಿಗುತ್ತಿಲ್ಲ ಎನ್ನುವವನ ಮಾತು ಗಮನಿಸಿ. ಏನು ಸಿಗಬೇಕಾದುದು? ಅದಕ್ಕೆ ಮಾನದಂಡವೇನು? ಕನಿಷ್ಠ ಅಗತ್ಯಗಳೆಂದೇ ಇಟ್ಟುಕೊಳ್ಳಿ. ಆಹಾರ, ಸೂರು, ಶಿಕ್ಷಣ, ವೈದ್ಯಕೀಯ ನೆರವು ಇತ್ಯಾದಿ. ಆದರೆ, ಇಷ್ಟಿದ್ದರೆ ಸಾಕೆ? ಇಲ್ಲ, ಇತರರಿಗೆ ಸಿಗುತ್ತಿರುವುದು ತನಗೂ ಸಿಗಬೇಕು ಎನ್ನುವುದು, ಸಮಾನತೆಯನ್ನು ಬಯಸುವುದು ತಪ್ಪೆ? ಖಂಡಿತಾ ತಪ್ಪಲ್ಲ. ಆದರೆ, ಈ ಸಮಾನತೆ ಯಾರೋ ಒಬ್ಬನಿಗೆ ಸಿಗಬೇಕಾದುದೇ ಅಥವಾ ಇಡೀ ಸಮುದಾಯಕ್ಕೆ ಸಿಗಬೇಕಾದುದೇ ಎನ್ನುವಲ್ಲಿ ಒಡಕುಗಳು, ಬಿರುಕುಗಳು ಯಾಕಿವೆ? ಅವನು ಎಷ್ಟು ಜಾಣನೆಂದರೆ, ತನಗೆ ಸಿಗದೇ ಹೋದುದನ್ನು ಪಡೆಯಲು ಸಮುದಾಯವನ್ನು ಬಳಸಿಕೊಳ್ಳುತ್ತಾನೆ ಮತ್ತು ತನ್ನ ಸಮುದಾಯಕ್ಕೆ ಅನ್ಯಾಯವಾಗಿದೆ ಎಂದು ಕೂಗತೊಡಗುತ್ತಾನೆ. ಆದರೆ, ಅವನ ಅಗತ್ಯ ವೈಯಕ್ತಿಕವಷ್ಟೇ ಆಗಿರುತ್ತದೆ ಮತ್ತು ವೈಯಕ್ತಿಕ ಅಗತ್ಯ ಪೂರೈಕೆಯಾಗುತ್ತಲೇ ಸಮುದಾಯವನ್ನು, ಸಾಮುದಾಯಿಕ ಸಿದ್ಧಾಂತವನ್ನು, ಅದರ ಹಿತವನ್ನು ಕೂಡ ಮರೆಯುತ್ತಾನೆ. ಇಲ್ಲಿನ ದೊರೈ ಮತ್ತು ಜೋಮೋ ಪಾತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಈ ಸತ್ಯ ಯಾರಿಗಾದರೂ ಹೊಳೆದು ಬಿಡುತ್ತದೆ. ಕಣ್ಣಿನ ಸಮಸ್ಯೆ ಇರುವವರಿಗೆ ಕನ್ನಡಕ ಹಂಚುವ ಸರಕಾರದ ನಿರ್ಧಾರವನ್ನು ಸಮಾನತೆಯ ನೆಲೆಯಲ್ಲಿ ಪ್ರಶ್ನಿಸಲಾಗುತ್ತದೆ. ಕೊನೆಗೆ ಸಮಾನತೆಯ ನೆಲೆಯಲ್ಲಿ ಎಲ್ಲರಿಗೂ ಕೂಲಿಂಗ್ ಗ್ಲಾಸ್ ಹಂಚಲಾಗುತ್ತದೆ ಮತ್ತು ದೊರೈ ತರಹದ ಎಲ್ಲರೂ ಇದರಿಂದ ತೃಪ್ತರಾಗುತ್ತಾರೆ! ಇದನ್ನು ಪ್ರಶ್ನಿಸುವ ಜೋಮೋ, ಕೊಡುವವರ ಮತ್ತು ಪಡೆಯುವವರ ಇಬ್ಬರ ಕೆಂಗಣ್ಣಿಗೂ ಗುರಿಯಾಗಬೇಕಾಗುತ್ತದೆ.

ಜೋಮೋ ಪಾತ್ರ ಒಂದು ತರಹದ ಸಾಮಾಜಿಕ ಚಳವಳಿಕಾರನದ್ದು, ಹೋರಾಟಗಾರನದ್ದು. ಕ್ರಾಂತಿಕಾರಿಯ, ಆದರ್ಶವಾದಿಯ ಲಕ್ಷಣಗಳೆಲ್ಲ ಇರುವ ಜೋಮೋಗೆ ಮಲೇಷ್ಯಾದ ತಮಿಳರ ಶಿಕ್ಷಣ, ಉದ್ಯೋಗ, ರಾಜಕೀಯ ಧ್ವನಿ ಮುಖ್ಯ. ಸಂಸಾರ, ಸ್ವಾರ್ಥ ಇಲ್ಲದವನಂತೆ ಕಾಣುವ ಅವನಿಗೆ ವೈಯಕ್ತಿಕ ಹೆಬ್ಬಯಕೆಗಳಿಲ್ಲ. ಆದರೆ, ದೊರೈಗೆ ತನ್ನ ಜೀವಮಾನದಲ್ಲಿ ಒಮ್ಮೆ ಚೆನ್ನೈಯ ಟಾಕೀಸಿನಲ್ಲೇ ಕುಳಿತು ರಜನಿಕಾಂತ್ ಸಿನಿಮಾ ನೋಡಬೇಕು, ಶಬರಿಮಲೈಗೆ ಭೇಟಿಕೊಡಬೇಕು ಮತ್ತು ಮಸಿ ಕೊಡಬಲ್ಲ ಕರ್ಪೂರ ತರಬೇಕೆಂಬ ಸಣ್ಣಪುಟ್ಟ ಆಸೆಗಳೇ ಮುಖ್ಯ. ಈ ಆಸೆಗಳಿಗೆ ಸಾಮಾಜಿಕ ಮುಖವಿಲ್ಲ. ಸೂಕ್ಷ್ಮವಾಗಿ ನೋಡಿ, ದೇಶದ ಆಡಳಿತದ ಚುಕ್ಕಾಣಿ ಹಿಡಿದವರಿಗೆ ಜೋಮೋನ ಆಶೋತ್ತರಗಳ ಈಡೇರಿಕೆ ಕಷ್ಟ. ದೊರೈಯನ್ನು ತೃಪ್ತಿಗೊಳಿಸುವುದು